KATK900001842023

**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**

**ತಿಪಟೂರು.**

**ಎಸ್.ಸಿ ಸಂಖ್ಯೆಃ 10006/2023**

**ಪ್ರಮಾಣೀಕರಿಸಿದ ದಿನಾಂಕಃ 03.06.2026.**

**ಚಾಸಾ.11**

**ಫ್ರಾಸಾ.8**

| | |
|---|---|
| ಹೆಸರು | ಪುಟ್ಟಸ್ವಾಮಯ್ಯ |
| ತಂದೆಯ ಹೆಸರು | ಲೇಟ್ ಮಾರೇಗೌಡ |
| ವಯಸ್ಸು | 63 ವರ್ಷ |
| ಉದ್ಯೋಗ | ನಿವೃತ್ತ ಸಹಾಯಕ ಇಂಜಿನಿಯರ್ |
| ವಾಸಸ್ಥಳ | ತುಮಕೂರು |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ಅಕ್ಟೋಬರ್ 2019 ರಿಂದ ಮೇ 2023 ರವರೆಗೆ ಸಹಾಯಕ ಇಂಜಿನಿಯರ್ ಆಗಿ ಚಿಕ್ಕನಾಯಕನಹಳ್ಳಿ ಲೋಕೋಪಯೋಗ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 14.11.2022 ರಂದು ಆರಕ್ಷಕ ವೃತ್ತ ನಿರೀಕ್ಷಕರ ಕಛೇರಿ, ಚಿಕ್ಕನಾಯಕನಹಳ್ಳಿ ರವರು ಮೊಕದ್ದಮೆ ಸಂಖ್ಯೆಃ 178/2022 ರ ಪ್ರಕರಣದಲ್ಲಿ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿ ನೀಡುವಂತೆ ಕೋರಿರುತ್ತಾರೆ.

ದಿಃ 04.01.2023 ರಂದು ಹುಳಿಯಾರು ಪೊಲೀಸ್ ಠಾಣೆಯ ಸಿಬ್ಬಂದಿಯಾದ ಜಾಫರ್ ರವರು ಕೃತ್ಯ ನಡೆದ ಸ್ಥಳವಾದ ಲಕ್ಷ್ಮಕ್ಕ ಕೋಂ ನಾರಾಯಣಪ್ಪ ರವರ ಮನೆ, ವಿಜಯನಗರ ಬಡಾವಣೆ, ಹುಳಿಯಾರು ಟೌನ್ ಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಜಾಫರ್ ರವರು ಸ್ಥಳವನ್ನು ತೋರಿಸಿದ್ದು, ನಾನು ಸದರಿ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿರುತ್ತೇನೆ. ಸದರಿ ಸ್ಥಳವು ವಾಸದ ಮನೆ ಇರುತ್ತದೆ. ನಾನು ಸದರಿ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ತಯಾರಿಸಿ ಕಛೇರಿಗೆ ನೀಡಿರುತ್ತೇನೆ.

ಸದರಿ ಚಿಕ್ಕನಾಯಕನಹಳ್ಳಿ ವೃತ್ತ ನಿರೀಕ್ಷಕರು ನೀಡಿರುವ ಮನವಿ ಪತ್ರ ದಿಃ 14.11.2022 ಅನ್ನು ನಮ್ಮ ಕಛೇರಿಯವರು ಸ್ವೀಕರಿಸಿರುತ್ತಾರೆ. ಸದರಿ ಮನವಿ ಪತ್ರವನ್ನು ನೋಡಿ ಸಾಕ್ಷಿ ಗುರುತಿಸಿದ್ದು, ಅದನ್ನು **ನಿ.ಪಿ–16** ಎಂದು ಗುರುತಿಸಲಾಯಿತು. ತಾನು ತಯಾರಿಸಿರುವ ನಕ್ಷೆಯಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ನಕ್ಷೆಯನ್ನು **ನಿ.ಪಿ–17** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ–17(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಂ.ಸಿ.ಎನ್ ವಕೀಲರಿಂದಃ**

ದಿಃ 14.11.2022 ರಂದು ಚಿಕ್ಕನಾಯಕನಹಳ್ಳಿ ವೃತ್ತ ನಿರೀಕ್ಷಕರಿಂದ ಬಂದ ಮನವಿ ಪತ್ರವನ್ನು ನಾನು ಸ್ವೀಕರಿಸಿರುವುದಿಲ್ಲ ಎಂದರೆ ಸರಿ. ಸದರಿ ದಿಃ 14.11.2022 ರ ಮನವಿ ಪತ್ರದಲ್ಲಿ ಮನೆಯ ನಂಬರ್ ಹಾಗೂ ಮನೆಯ ಚೆಕ್ಕುಬಂದಿ ನಮೂದು ಮಾಡಿಲ್ಲ ಎಂದರೆ ಸರಿ. ದಿಃ 04.01.2023 ರಂದು ನಾನು ಸ್ಥಳಕ್ಕೆ ಹೋಗುವ ಮುನ್ನ ಚಿಕ್ಕನಾಯಕನಹಳ್ಳಿ ಪೊಲೀಸ್ ಠಾಣೆಯವರೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು

ಮಾಡಿರುವುದಿಲ್ಲ. ಸದರಿ ನಿ.ಪಿ–16 ರಲ್ಲಿ ನಕ್ಷೆ ತಯಾರಿಸುವಾಗ ನಮೂದು ಮಾಡಿರುವ ಸ್ಥಳವು ಹುಳಿಯಾರು ಪಟ್ಟಣ ಪಂಚಾಯತಿ ಒಳಪಡುತ್ತದೆ, ಅದರ ದಾಖಲಾತಿಗಳನ್ನು ನಾನು ಪರಿಶೀಲಿಸಿರುವುದಿಲ್ಲ. ನಾನು ಸದರಿ ಸ್ಥಳದ ನಕ್ಷೆಯನ್ನು ತಯಾರಿಸಲು ಪಟ್ಟಣ ಪಂಚಾಯತಿಯ ಅಧಿಕಾರಿಗಳ ಸಹಾಯ ಪಡೆದು ಕೊಂಡಿರುತ್ತೇನೆ. ನಾನು ಹೇಳಿರುವ ನಿ.ಪಿ–17 ವರದಿಯಲ್ಲಿಯೂ ಸಹಃ ಸ್ಥಳದ ನಂಬರ್ ಅನ್ನು ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ಕೃತ್ಯ ನಡೆದ ಸ್ಥಳವನ್ನು ತೋರಿಸಿರುತ್ತಾರೆ ಎಂದು ಹೇಳುವ ಸಿಬ್ಬಂದಿಯಾದ ಜಾಫರ್ ರವರ ಸಹಿಯನ್ನು ಸಹಃ ನಿ.ಪಿ–17 ರಲ್ಲಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಹಾಗೂ ಸದರಿ ಸ್ಥಳವನ್ನು ಜಾಫರ್ ರವರು ತೋರಿಸಿಲ್ಲದಿದ್ದರೂ ಸಹಃ ನಾನು ಪೊಲೀಸರಿಗೆ ಸಹಾಯ ಮಾಡುವ ಉದ್ದೇಶದಿಂದ ಕಛೇರಿಯಲ್ಲಿ ನಿ.ಪಿ–17 ನಕ್ಷೆಯನ್ನು ಪೊಲೀಸರು ಹೇಳಿದ ಹಾಗೇ ತಯಾರು ಮಾಡಿ ನೀಡಿರುತ್ತೇನೆ ಎಂದರೆ ಸರಿಯಲ್ಲ.

**(ಮರುವಿಚಾರಣೆ ಇಲ್ಲವೆಂದಿದ್ದಾರೆ).**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ**

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**